**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 173/2025**

| | | | |
|---|---|---|---|
| ಹೆಸರು | | ಶ್ರೀ ಶಂಕರ | ಚಾಸಾಃ 03 |
| ತಂದೆ ಹೆಸರು | | ಶ್ರೀ ಪುಟ್ಟಬಸವಯ್ಯ | ಪ್ರಾಸಾಃ 03 |
| ವಯಸ್ಸು | | 30 ವರ್ಷ | ಸಾಕ್ಷಿಯನ್ನು ದಿನಾಂಕಃ 25.03.2026 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ಕೂಲಿ | |
| ವಾಸ | | ಹೋರೆಯಾಲ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ಚಾಸಾ–1, 2 ಮತ್ತು ಆರೋಪಿಗಳು ನನಗೆ ಗೊತ್ತು. ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನಾನು ಚಾಸಾ–1 ಮತ್ತು 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪೂರ್ಣ ಪ್ರಮಾಣದಲ್ಲಿ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ 07.12.2024 ರಂದು ಬೆಳಿಗ್ಗೆ 9.45 ರ ಸಮಯಕ್ಕೆ ಚಾಸಾ–1 ಮತ್ತು 2 ರವರು ನಮ್ಮ ಗ್ರಾಮದ ಆಸ್ಪತ್ರೆಯ ಕಡೆಯಿಂದ ಉತ್ತಕ್ಕೆ ತನಿ ಎರೆದು ಮನೆ ಕಡೆ ಬರುತ್ತಿದ್ದರು ಎಂದರೆ ಸರಿಯಲ್ಲ. ಆಗ 1ನೇ ಆರೋಪಿ ರವರು ಚಾಸಾ–1 ರವರನ್ನು ತಡೆದು ನಿಮ್ಮ ತಂದೆ ನಮ್ಮನ್ನು ಮರಳು ತುಂಬಿಕೊಂಡಿದ್ದಾರೆ ಎಂದು ಬೈಯುತ್ತಿದ್ದಾನೆ ಎಂದು ಜಗಳ ತೆಗೆದು ಚಾಸಾ–1 ರವರು ಮೈಕೈಗೆ ಕೈಗಳಿಂದ ಹೊಡೆದು,

ತಲೆಯ ಜುಟ್ಟನ್ನು ಹಿಡಿದು ಎಳೆದಾಡಿ, ಕಾಲಿನಿಂದ ಒದ್ದು ಕತ್ತಿಗೆ ಪರಚಿ ಬೀದಿಯಲ್ಲಿ ಅವಮಾನ ಮಾಡಿದರು ಎಂದರೆ ಸರಿಯಲ್ಲ. ಆಗ ಚಾಸ–2 ರವರು ಬಿಡಿಸಲು ಹೋದಾಗ ಆರೋಪಿ 2 ಮತ್ತು 3 ರವರು ಚಾಸಾ–2 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು ಆತ ಧರಿಸಿದ ಬಟ್ಟೆಯನ್ನು ಹರಿದು ಹಾಕಿ ಮು.ಮಾ.1 ರಿಂದ ಚಾಸಾ–2 ರವರ ಬಲಗೈಗೆ ಎರಡನೇ ಆರೋಪಿ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. ಅಲ್ಲೆ ಇದ್ದ ನಾನು ಮತ್ತು ಚಾಸಾ–4 ರವರು ಜಗಳ ಬಿಡಿಸಿದೇವು ಎಂದರೆ ಸರಿಯಲ್ಲ. ಗಾಯಗೊಂಡಿದ್ದ ಚಾಸಾ–1 ಮತ್ತು 2 ರವರನ್ನು ನಾವು ಬೇಗೂರು ಆಸ್ಪತ್ರೆಗೆ ಕರೆದುಕೊಂಡು ಹೋದೇವು ಎಂದರೆ ಸರಿಯಲ್ಲ. ವೈದ್ಯರು ಚಾಸಾ–2 ರವರಿಗೆ ಹೆಚ್ಚಿನ ಚಿಕಿತ್ಸೆಗೆ ಚಾಮರಾಜನಗರ ಜಿಲ್ಲಾ ಆಸ್ಪತ್ರೆಗೆ ಹೋಗುವಂತೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ–1 ರವರು ಚಾಸಾ–2 ರವರನ್ನು ಸದರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸದರಿ ವಿಷಯವಾಗಿ ಚಾಸಾ–1 ರವರು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ದಿಃ 16.12.2024 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ6 ಎಂದು ಗುರುತಿಸಲಾಯಿತು. ನಿಪಿ6 ರ ವಿಷಯ ಗೊತ್ತಿದ್ದರು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ ಇರುವುದಿಲ್ಲ:**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**